ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಕನ್ನಡ ಅಧ್ಯಯನ ವಿಭಾಗ

ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆಯ ಸ್ವರೂಪ

(ಪ್ರಾತಿನಿಧಿಕ ಕಥೆಗಾರ್ತಿಯರನ್ನು ಅನುಲಕ್ಷಿಸಿ)

(ಪಿಎಚ್.ಡಿ ಅಧ್ಯಯನಕ್ಕಾಗಿ ಸಿದ್ಧಪಡಿಸಿದ ಸಂಶೋಧನ ಮಹಾಪ್ರಬಂಧದ ಪೂರ್ವಭಾವಿ ಸಾರಲೇಖ)

ಸಂಶೋಧನ ವಿದ್ಯಾರ್ಥಿನಿ

ಗಾಯತ್ರಿ ಆರ್ ಅಂಟೀನ

ಮಾರ್ಗದರ್ಶಕರು

ಪ್ರೊ. ಮಹೇಶ ಚಿಂತಾಮಣಿ

ಹಿರಿಯ ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

೨೦೨೪-೨೫

ಪರಿವಿಡಿ

ಅಧ್ಯಯನದ ಉದ್ದೇಶ

ಅಧ್ಯಯನದ ಸ್ವರೂಪ, ವ್ಯಾಪ್ತಿ

ಅಧ್ಯಯನದ ವಿಧಾನ

ಅಧ್ಯಯನದ ಮಿತಿ

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ-೧

ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯ: ಒಂದು ಅವಲೋಕನ

೧.೧ ಪ್ರವೇಶ

೧.೨ ಕನ್ನಡ ಕಥಾ ಸಾಹಿತ್ಯ ಮತ್ತು ಮಹಿಳೆ

೧.೩ ಮಹಿಳಾ ಕಥಾ ಸಾಹಿತ್ಯದ ಇತಿಹಾಸ, ಹಿನ್ನೆಲೆ, ಪ್ರೇರಣೆ, ಪ್ರಭಾವ

೧.೪ ಮಹಿಳಾ ಕಥಾ ಸಾಹಿತ್ಯದ ವೈಶಿಷ್ಟ್ಯತೆಗಳು

೧.೫ ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯ ರಚನೆಯ ಸ್ಥೂಲ ಸಮೀಕ್ಷೆ

ಅಧ್ಯಾಯ-೨

ಪ್ರಾತಿನಿಧಿಕ ಕಥೆಗಾರ್ತಿಯರ ಜೀವನ ಮತ್ತು ಸಾಹಿತ್ಯ

೨.೧ ಸಾರಾ ಅಬೂಬಕ್ಕರ ಅವರ ಜೀವನ ಮತ್ತು ಸಾಹಿತ್ಯ

೨.೨ ಗೀತಾ ನಾಗಭೂಷಣ ಅವರ ಜೀವನ ಮತ್ತು ಸಾಹಿತ್ಯ

೨.೩ ಬಿ.ಟಿ ಲಲಿತಾ ನಾಯಕ ಅವರ ಜೀವನ ಮತ್ತು ಸಾಹಿತ್ಯ

೨.೪ ವೀಣಾ ಶಾಂತೇಶ್ವರ ಅವರ ಜೀವನ ಮತ್ತು ಸಾಹಿತ್ಯ

೨.೫ ಬಾನು ಮುಷ್ತಾಕ ಅವರ ಜೀವನ ಮತ್ತು ಸಾಹಿತ್ಯ

ಅಧ್ಯಾಯ–೩

ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯ: ಕೌಟುಂಬಿಕ ಹಿಂಸೆ

೩.೧ ಕುಟುಂಬದ ಪರಿಕಲ್ಪನೆ, ಅರ್ಥ ಮತ್ತು ಸ್ವರೂಪ

೩.೨ ಹಿಂಸೆಯ ಪರಿಕಲ್ಪನೆ, ಅರ್ಥ

೩.೨ ಹಿಂಸೆಯ ಸ್ವರೂಪ

೩.೪ ಕುಟುಂಬದಲ್ಲಿ ಹೆಣ್ಣಿನ ಪರಿಕಲ್ಪನೆ

೩.೫ ಕುಟುಂಬದಲ್ಲಿ ಕಂಡುಬರುವ ಹಿಂಸೆಗಳು– (ದೈಹಿಕ, ಆರ್ಥಿಕ, ಮಾನಸಿಕ, ಲೈಂಗಿಕ ಮತ್ತು ಅಧಿಕಾರ ಹಿಂಸೆ)

೩.೬ ಕೌಟುಂಬಿಕ ಹಿಂಸೆಯನ್ನು ತಡೆಗಟ್ಟುವಲ್ಲಿ ಜಾಗತಿಕ ಮಟ್ಟದಲ್ಲಿನ ಚಿಂತನೆ ಮತ್ತು ಕಾನೂನು ಕ್ರಮಗಳು.

ಅಧ್ಯಾಯ– ೪

ಸಾರಾ ಅಬೂಬಕ್ಕರ ಅವರ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆ

ಅಧ್ಯಾಯ– ೫

ಗೀತಾ ನಾಗಭೂಷಣ ಅವರ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆ

ಅಧ್ಯಾಯ– ೬

ಬಿ.ಟಿ. ಲಲಿತಾ ನಾಯಕ ಅವರ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆ

ಅಧ್ಯಾಯ– ೭

ವೀಣಾ ಶಾಂತೇಶ್ವರ ಅವರ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆ

ಅಧ್ಯಾಯ– ೮

ಬಾನು ಮುಷ್ತಾಕ ಅವರ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆ

ಅಧ್ಯಾಯ– ೯

ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆ: ತೌಲನಿಕ ನೋಟ

ಸಮಾರೋಪ

ಅಧ್ಯಯನದ ಫಲಿತಗಳು

ಮುಂದಿನ ಅಧ್ಯಯನದ ಸಾಧ್ಯತೆಗಳು

ಅನುಬಂಧಗಳು

೧. ಗ್ರಂಥಋಣ

ಆಕರ ಗ್ರಂಥಗಳು

ಪರಾಮರ್ಶನ ಗ್ರಂಥಗಳು

ಅಂತರ್ಜಾಲ

೨. ಪ್ರಾತಿನಿಧಿಕ ಕಥೆಗಾರ್ತಿಯರ ಸಂದರ್ಶನ

೩. ಛಾಯಾಚಿತ್ರಗಳು

ಪ್ರಸ್ತಾವನೆ

ಬರಹದ ಪ್ರಕ್ರಿಯೆಯಲ್ಲಿ ಅಭಿವ್ಯಕ್ತಗೊಳ್ಳುವ ಸಂವೇದನೆಯ ಸ್ವರೂಪವು ಬರಹಗಾರರಿಂದ ಬರಹಗಾರರಿಗೆ ಭಿನ್ನವಾಗುತ್ತಾ ಬಂದಿರುತ್ತದೆ. ಅನುಭವಲೋಕದ ಗ್ರಹಿಕೆಗಳು, ಆಯಾ ಸಾಮಾಜಿಕ ಪರಿಸರದ ಆವರಣವನ್ನು ಅವಲಂಬಿಸಿರುತ್ತದೆ. ಹಾಗಾಗಿಯೇ ಮಹಿಳೆಯರ ಅನುಭವಗಳು ಪುರುಷ ಲೋಕದ ಅನುಭವಗಳಿಗಿಂತ ಭಿನ್ನರೂಪ ಪಡೆದಿವೆ. ಕೌಟುಂಬಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಮತ್ತು ಆರ್ಥಿಕ ಸಂರಚನೆಗಳು ಮಹಿಳೆಯ ಬದುಕನ್ನು ಹೇಗೆ ರೂಪಿಸಿವೆ ಎಂಬುದು ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ, ಮಹಿಳಾ ಸಾಹಿತ್ಯವೆಂಬ ಪ್ರತ್ಯೇಕ ಅಧ್ಯಯನವೂ ರಿಯಾಯಿತಿ, ಅನುಕಂಪಗಳನ್ನು ನಿರಾಕರಿಸಿ, ಮಹಿಳೆಯರ ಬರಹಗಳ ವಿಶಿಷ್ಟತೆಗಳನ್ನು, ಹೊಸ ಸಾಧ್ಯತೆಗಳನ್ನು ಶೋಧಿಸುವ ಪ್ರಯತ್ನವನ್ನು ಈ ಸಂದರ್ಭದಲ್ಲಿ ಕೈಗೊಳ್ಳಲಾಗಿದೆ. ಮಹಿಳಾ ಬರಹಗಾರರು ತಮ್ಮ ಧ್ಯೇಯ-ಧೋರಣೆಗಳನ್ನು ಸಾಹಿತ್ಯ ಬರವಣಿಗೆಯ ಮೂಲಕ ವ್ಯಕ್ತಪಡಿಸಿದಾಗ ಯಾವ ಯಾವ ವಿಧಾನಗಳನ್ನು ಅನುಸರಿಸಿತ್ತಾರೆಂಬುದು ಕುತೂಹಲಕಾರಿ ಸಂಗತಿಯಾಗಿದೆ. ಲೇಖಕಿಯರ ಕೃತಿಯ ವಸ್ತು, ಆಶಯ, ಭಾಷೆ, ನಿರೂಪಣಾ ಶೈಲಿ-ತಂತ್ರಗಳನ್ನು ಆಧರಿಸಿ ಕೆಲವು ಪರಿಕಲ್ಪನಾತ್ಮಕ ನೆಲೆಗಳಲ್ಲಿ ಅಧ್ಯಯನ ಮಾಡಲಾಗಿದೆ.

ಆಧುನಿಕತೆ ಬೆಳೆದಂತೆ ಬದುಕಿನಲ್ಲಿ ಯಾಂತ್ರಿಕತೆ ವ್ಯಾಪಿಸಿಕೊಂಡಿದೆ. ಪ್ರಾಚೀನ ಕಾಲದ ಹಾಗೆ ಇಂದು ಹಿರಿಯ ಗಾತ್ರದ ಗ್ರಂಥಗಳನ್ನು ಅಧ್ಯಯನ ಮಾಡುವ ಅಭಿರುಚಿಯಿದ್ದರೂ ಸಮಯವಿಲ್ಲ. ಗಡಿಯಾರದಗುಂಟ ಸುತ್ತುವ ಇಂದಿನ ಬದುಕು ಗಡಿಬಿಡಿದಾಯಕವಾದುದು. ಹಿಂದಿನ ಹಾಗೆ ಮಹಾಕಾವ್ಯಗಳನ್ನು ಸೃಷ್ಟಿಸುವುದಾಗಲೀ, ಓದುವುದಾಗಲೀ, ಅಸಾಧ್ಯವೆನ್ನುವ ಹಾಗೆ ಇಂದು ಪರಿಸರ ನಿರ್ಮಾಣವಾಗಿದೆ. ದೊರೆಯುವ ಕಡಿಮೆ ಅವಧಿಯಲ್ಲಿಯೇ ಲಲಿತಕಲೆಗಳ ಸೃಷ್ಟಿ, ಅಧ್ಯಯನ, ಸಂಶೋಧನೆ, ತನ್ಮೂಲಕ ಸುಖ-ಸಂತೋಷ ಕ್ರಿಯೆಗಳು ಇಂದು ನಡೆಯಬೇಕಾಗಿವೆ.

ಅಧ್ಯಯನದ ಸ್ವರೂಪ:

ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆಯ ಸ್ವರೂಪ ಎಂಬ ಅಧ್ಯಯನವು ಕನ್ನಡ ಸಾಹಿತ್ಯದಲ್ಲಿ ಆಯ್ದ ಪ್ರಾತಿನಿಧಿಕ ಲೇಖಕಿಯರನ್ನು ಅನುಲಕ್ಷಿಸಿ, ಅಧ್ಯಯನವನ್ನು ಕೈಗೊಳ್ಳಲಾಗಿದೆ. ಆಯ್ದುಕೊಂಡ ಬರಹಗಾರರ ಕಥಾಸಂಕಲನಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಅನೇಕ ಮಹಿಳಾ ಕತೆಗಾರ್ತಿಯರು ಇದ್ದರೂ ಕೂಡಾ ಈ ಕತೆಗಾರ್ತಿಯರ ಕತೆಗಳನ್ನು

ಆಯ್ದುಕೊಳ್ಳಲು ಕಾರಣವೆಂದರೆ ನಾನು ಆಯ್ಕೆ ಮಾಡಿರುವ ಸಂಶೋಧನಾ ಶೀರ್ಷಿಕೆಗೆ ತಕ್ಕಂತೆ ಇವರ ಕಥೆಗಳಲ್ಲಿ ಕೌಟುಂಬಿಕ ಹಿಂಸೆಯ ಚಿತ್ರಣವು ಹೆಚ್ಚಾಗಿ ಕಂಡುಬರುತ್ತದೆ. ಜೊತೆಗೆ ಕತೆಗಾರ್ತಿಯರು ಸ್ವತಹ ಕಂಡದ್ದು ಹಾಗೂ ಅನುಭವಿಸಿದ್ದನ್ನು ಅವರ ಕತೆಗಳಲ್ಲಿ ನಿರೂಪಿಸಿದ್ದಾರೆ. ಅಷ್ಟೇಅಲ್ಲದೇ ಆಯಾ ಪ್ರದೇಶ, ಭಾಷೆ, ನೈಜತೆ, ಕಾಲ್ಪನಿಕತೆ, ಕಥೆ, ಕಥೆಯ ವಸ್ತು, ಪಾತ್ರಚಿತ್ರಣ ವಿಭಿನ್ನವಾಗಿ ಮೂಡಿಬಂದಿವೆ. ಈ ಸಂಶೋಧನೆಯನ್ನು ಬಹುಶಿಸ್ತೀಯ ವ್ಯಾಪಕತೆಯಲ್ಲಿ ಅಧ್ಯಯನವನ್ನು ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ :

ಇಪ್ಪತ್ತನೇ ಶತಮಾನದ ಪ್ರಾರಂಭದಿಂದ ಕನ್ನಡ ನಾಡಿನ ಮಹಿಳೆ ಭಾರತೀಯ ಮಹಿಳೆಯರಂತೆಯೇ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಮುಂದೆ ಬಂದಳು. ಆಧುನಿಕ ಸಾಹಿತ್ಯದ ವಿವಿಧ ಕ್ಷೇತ್ರವನ್ನು ಪರಿಶೀಲಿಸಿದಾಗ ಇಪ್ಪತ್ತನೇ ಶತಮಾನದ ಮಹಿಳೆ ಎಲ್ಲ ಪ್ರಕಾರಗಳಲ್ಲಿ ತನ್ನ ಪ್ರತಿಭೆಯನ್ನು ತೋರುವ ಪ್ರಯತ್ನ ಮಾಡಿದ್ದನ್ನು ಗಮನಿಸಬಹುದು. ಹೀಗೆ ಈ ಪ್ರಯತ್ನಗಳು ವಿಸ್ತರಿಸಿ ಇಂದು ಮಹಿಳಾ ಸಾಹಿತ್ಯಕ್ಕೆ ಪ್ರತಿಷ್ಠಿತ ಸ್ಥಾನ ದೊರಕಿದ್ದನ್ನು ಕಾಣುತ್ತೇವೆ. ಕತೆ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ, ಜೀವನ ಚರಿತ್ರೆ, ಹೀಗೆ ಮುಂತಾದ ಪ್ರಕಾರಗಳಲ್ಲಿ ಮಹಿಳೆಯು ಸಾಹಿತ್ಯ ಸೃಷ್ಠಿ ಮಾಡಿದ್ದಾರೆ, ಹಾಗೆಯೇ ವೈವಿಧ್ಯಮಯವಾದ ಕೊಡುಗೆಯನ್ನು ನೀಡಿದ್ದಾರೆ. ಇತ್ತೀಚಿನ ಕಾಲದಲ್ಲಿ ಕಾವ್ಯ, ವಿಮರ್ಶೆ, ಆತ್ಮಕಥೆ, ಸಂಶೋಧನೆ ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿ ಕಾಣುತ್ತೇವೆ.

ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದ ಮುಖ್ಯ ಪ್ರಕಾರವಾಗಿರುವ ಸಣ್ಣಕಥೆಯು ಈ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತದೆ. ಇಲ್ಲಿ ಐದು ಆಯ್ದ ಮಹಿಳಾ ಲೇಖಕಿಯರ ಕಥೆಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ತಿರುಮಲೆ ರಾಜಮ್ಮ, ಕೊಡಗಿನ ಗೌರಮ್ಮ, ತ್ರಿವೇಣಿ, ಎಂ.ಕೆ. ಇಂದಿರಾ, ವಾಣಿ, ಅನುಪಮಾ ನಿರಂಜನ, ಎಚ್.ವಿ. ಸಾವಿತ್ರಮ್ಮ, ಎಚ್. ಎಸ್. ಪಾರ್ವತಿ, ಎಂ.ಕೆ ಇಂದಿರಾ, ಕೊಡಗಿನ ಗೌರಮ್ಮ, ಇನ್ನೂ ಅನೇಕ ಲೇಖಕಿಯರು ಕಾದಂಬರಿ ಯುಗದ ಪ್ರಾರಂಭದಲ್ಲಿ ಕಥಾ ಸಂಕಲನಗಳನ್ನು, ಲೇಖನಗಳನ್ನು ವಿಮರ್ಶಾ ಸಂಕಲನಗಳನ್ನು ಬರೆದು ಪ್ರಕಟಿಸಿದ್ದಾರೆ. ಈಗಲೂ ಅನೇಕ ಲೇಖಕಿಯರು ಈ ಕ್ಷೇತ್ರದಲ್ಲಿ ತೊಡಗಿದ್ದಾರೆ. ಅಂತಹ ಲೇಖಕಿಯರ ಸಾಲಿನಲ್ಲಿ ಗೀತಾ ನಾಗಭೂಷಣ, ಸಾರಾ ಅಬೂಬಕ್ಕರ, ಬಿ.ಟಿ. ಲಲಿತಾ ನಾಯಕ, ವೀಣಾ ಶಾಂತೇಶ್ವರ(ಯಲಬುರ್ಗಿ) ಮತ್ತು ಬಾನು

ಮುಷ್ತಾಕ ಈ ಲೇಖಕಿಯರ ಕಥೆಗಳಲ್ಲಿ ಘಟನೆ, ಸಂದರ್ಭ, ಸನ್ನಿವೇಶ ಮತ್ತಿತರ ವಿವರಗಳು ಸ್ಪಷ್ಟವಾಗಿ ದಾಖಲಿಸುತ್ತವೆ. ಗೀತಾ ನಾಗಭೂಷಣ ಅವರ ಜ್ವಲಂತ ಹಾಗೂ ಅವ್ವ ಮತ್ತು ಇತರ ಕಥೆಗಳು ಎಂಬ ಕಥಾಸಂಕಲನಗಳು, ಬಿ. ಟಿ. ಲಲಿತಾ ನಾಯಕ ಅವರ ಹಬ್ಬ ಮತ್ತು ಬಲಿ(೧೯೮೯) ಕಥಾಸಂಕಲನ, ಸಾರಾ ಅಬೂಬಕ್ಕರ ಅವರ ಚಪ್ಪಲಿಗಳು(೧೯೮೯), ಪಯಣ ಮತ್ತು ಇತರ ಕಥೆಗಳು(೧೯೯೨), ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು(೧೯೯೨), ಖೆಡ್ಡ, ಸುಮಯ್ಯಾ(೨೦೦೪- ಜನಪದ ಆಧರಿಸಿದ ಕಥೆಗಳು) ಮತ್ತು ಗಗನಸಖಿ(೨೦೦೭) ಎಂಬ ಕಥಾಸಂಕಲನಗಳು, ವೀಣಾ ಶಾಂತೇಶ್ವರ ಅವರ ಮುಳ್ಳುಗಳು(೧೯೬೮), ಕೊನೆಯ ದಾರಿ(೧೯೭೨), ಕವಲು(೧೯೭೬), ಹಸಿವು(೧೯೮೪) ಹಾಗೂ ಬಿಡುಗಡೆ(೧೯೯೪) ಎಂಬ ಕಥಾಸಂಕಲನಗಳು(ನಡೆದದ್ದೇ ದಾರಿ-ಸಮಗ್ರ ಕಥಾಸಂಕಲನ) ಮತ್ತು ಬಾನು ಮುಷ್ತಾಕ ಅವರ ಹೆಜ್ಜೆ ಮೂಡಿದ ಹಾದಿ, ಬೆಂಕಿ ಮಳೆ, ಎದೆಯ ಹಣತೆ, ಸಫೀರಾ ಹಾಗೂ ಬಡವರ ಮಗಳು ಹೆಣ್ಣಲ್ಲ ಕಥಾಸಂಕಲನಗಳನ್ನು(ಹಸೀನಾ ಮತ್ತು ಇತರ ಕಥೆಗಳು-ಸಮಗ್ರ ಕಥಾಸಂಕಲನ) ಮಹಿಳಾ ಕೇಂದ್ರಿತ ದೃಷ್ಟಿಕೋನದಿಂದ ಕಥೆಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಿದೆ.

ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆಯ ಸ್ವರೂಪ ಎಂಬ ಶೀರ್ಷಿಕೆಯಡಿಯಲ್ಲಿ ಈ ಅಧ್ಯಯನ ಮಾಡಲಾಗಿದೆ. ಕನ್ನಡ ಸಾಹಿತ್ಯವು ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಎಂಬ ಸಾಹಿತ್ಯ ಪಂಥಗಳ ಮೂಲಕ ಬೆಳೆದು ಬಂದಿದೆ. ಈ ಕಾಲಘಟ್ಟಗಳು ತಮ್ಮದೇಯಾದ ಮನೋಧರ್ಮಗಳನ್ನು ಒಳಗೊಂಡಿವೆ. ಇವುಗಳ ಹಿನ್ನೆಲೆಯಲ್ಲಿ ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯವನ್ನು ಸೀಮಿತವಾಗಿರಿಸಿಕೊಂಡು ಈ ಲೇಖಕಿಯರ ಕತೆಗಳಲ್ಲಿನ ಮಹಿಳೆಯರ ಮೇಲಿನ ಕೌಟುಂಬಿಕ ಹಿಂಸೆಯ ಚಿತ್ರಣಕ್ಕೆ ಹೆಚ್ಚಿನ ಒತ್ತನ್ನು ನೀಡಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಒಂದು ಮಹಾಪ್ರಬಂಧದ ಚೌಕಟ್ಟಿಗೆ ಸರಿದೂಗುವಷ್ಟು ಹಾಗೂ ಸಂಶೋಧನೆಗೆ ಇರುವ ಕಾಲದ ಮಿತಿಗೆ ಅನ್ವಯವಾಗುವಂತೆ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಕನ್ನಡ ಮಹಿಳಾ ಕಥಾಸಾಹಿತ್ಯದಲ್ಲಿ ಐದು ಲೇಖಕಿಯರನ್ನು ವ್ಯಾಪ್ತಿಯಾಗಿರಿಸಿಕೊಳ್ಳಲಾಗಿದೆ. ಈ ಲೇಖಕಿಯರ ಕಥೆಗಳಲ್ಲಿನ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ಹಿಂಸೆಯ ಕುರಿತು ಹಾಗೂ ಅವರ ಕಥೆಗಳಲ್ಲಿ ವ್ಯಕ್ತವಾಗಿರುವ ಕಥಾ ನಿರೂಪಣೆ, ವಸ್ತು, ಶೈಲಿ, ಭಾಷೆ ಹಾಗೂ ಕಥೆಗಳ ಬಗ್ಗೆ ಅಧ್ಯಯನ ಮಾಡಲಾಗಿದೆ. ಕಥೆಗಾರ್ತಿಯರ ಮನೋಧರ್ಮ ಹಾಗೂ ಹಿಂಸೆಯ ಚಿತ್ರಣದ ಹಿನ್ನೆಲೆಯಲ್ಲಿ ಸಾಮಿಪ್ಯ, ಭಿನ್ನತೆ, ಸತ್ವ, ವಸ್ತುವಿಷಯಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ.

ಪ್ರಸ್ತುತ ಸಂಶೋಧನ ವಿಷಯಕ್ಕೆ ಸಂಬಂಧಿಸಿದಂತೆ ಸಮಗ್ರವಾದ ಅಧ್ಯಯನ ನಡೆದಿಲ್ಲ. ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆಯ ಸ್ವರೂಪ ಎಂಬ ಸಂಶೋಧನ ವಿಷಯವನ್ನು ಕುರಿತು ಗಂಭಿರವಾದ ಅಧ್ಯಯನವು ಇದುವರೆಗೂ ನಡೆದಿರುವುದಿಲ್ಲ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕಂಡುಬಂದಿರುವ ಹಿಂಸೆಯ ಚಿತ್ರಣ, ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯದ ಕಥೆಗಾರ್ತಿಯರ ಕಥೆಗಳಲ್ಲಿ ಕಂಡುಬರುತ್ತದೆ. ಆದ್ದರಿಂದ ಮಹಿಳಾ ಕಥಾ ಸಾಹಿತ್ಯದ ಪ್ರಕಾರವನ್ನು ಸಂಶೋಧನೆಗೆ ಆಯ್ಕೆಮಾಡಲಾಗಿದೆ.

ಅಧ್ಯಯನದ ಉದ್ದೇಶಗಳು:

೧. ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿನ ಕುಟುಂಬದಲ್ಲಿ ಮಹಿಳಾ ಬದುಕನ್ನು ಕುರಿತ ಪರಿಕಲ್ಪನೆಯನ್ನು ತಿಳಿದುಕೊಳ್ಳುವ ಉದ್ದೇಶ ಹೊಂದಿದೆ.

೨. ಸ್ವಾತಂತ್ರ್ಯೋತ್ತರ ಮಹಿಳಾ ಲೇಖಕಿಯರ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆಯ ಪರಿಕಲ್ಪನೆಯನ್ನು ನಿರ್ವಚಿಸುವ ಪ್ರಯತ್ನವನ್ನು ಗುರುತಿಸುವುದಾಗಿದೆ.

೩. ಕೌಟುಂಬಿಕ ನೆಲೆಯಲ್ಲಿನ ಸಂಘರ್ಷ ಸ್ಥಿತಿ ಮತ್ತು ವಿವಿಧ ಸಾಮಾಜಿಕ, ಧಾರ್ಮಿಕ, ಘಟಕಗಳೊಂದಿಗೆ ಹೊಂದಿದ ಸಂಘರ್ಷ ಸ್ಥಿತಿಯಿಂದ ಪ್ರೇರಿತವಾಗಿ ಸೃಷ್ಟಿಯಾಗಿದೆ. ಮಹಿಳಾ ಕಥಾಸಾಹಿತ್ಯದಲ್ಲಿ ಕೇಂದ್ರಬಿಂದುವಾಗಿರುವ ಮಹಿಳೆಯು ಅನುಭವಿಸುವ ಹಿಂಸೆ, ಸಿಡಿದು ನಿಲ್ಲುವ ಛಾತಿ: ಕಂಡುಕೊಳ್ಳುವ ಪರ್ಯಾಯ ಮಾರ್ಗಗಳ ಶೋಧನೆಯನ್ನು ಕೈಗೊಳ್ಳಲಾಗಿದೆ.

೪. ಪ್ರಾರಂಭ ಕಾಲದಲ್ಲಿ ಬರಹಕ್ಕೆ ತೊಡಗಿರುವ ಬರಹಗಾರರ ಬರಹ ಕಾಲಾನಂತರದಲ್ಲಿ ಬರೆಯ ತೊಡಗಿದ ಬರಹಗಾರರಾದ ಗೀತಾ ನಾಗಭೂಷಣ, ಸಾರಾ ಅಬೂಬಕ್ಕರ, ಬಿ.ಟಿ. ಲಲಿತಾ ನಾಯಕ, ವೀಣಾ ಶಾಂತೇಶ್ವರ ಮತ್ತು ಬಾನು ಮುಷ್ತಾಕ ಅವರ ಕಥೆಗಳಲ್ಲಿನ ಅನೇಕ ಪಲ್ಲಟಗಳನ್ನು ಗುರುತಿಸುವ ಹಂಬಲ ಹೊಂದಿದೆ.

೫. ಮಹಿಳಾ ಸಾಹಿತ್ಯವು ಕಥಾ ಸಾಹಿತ್ಯದಲ್ಲಿನ ವಿಭಿನ್ನವಾಗಿ ಮೂಡಿಬಂದಿರುವ ಹೊಸ ಚರ್ಚೆಯನ್ನು ಕಂಡುಕೊಳ್ಳುವ ಉದ್ದೇಶವನ್ನು ಈ ಪ್ರಬಂಧವು ಹೊಂದಿದೆ.

೬. ಮಹಿಳಾ ಕಥಾ ಸಾಹಿತ್ಯ ಬರಹಗಳಲ್ಲಿ ದೈಹಿಕ, ಆರ್ಥಿಕ, ಮಾನಸಿಕ ಮತ್ತು ಲೈಂಗಿಕ ಹಿಂಸೆ ಇವೆಲ್ಲದಕ್ಕೂ ಕಾರಣವಾಗಿರುವ ಪ್ರಚೋದನೆಗಳನ್ನು ಬಡಿದೊಡಿಸುವ ಕಥೆಗಳಲ್ಲಿನ ಮೌಲ್ಯವನ್ನು ಹುಡುಕುವ ಉದ್ದೇಶ ಹೊಂದಿದೆ.

೭. ಕಥೆಗಳಲ್ಲಿ ವ್ಯಕ್ತವಾಗಿರುವ ಕುಟುಂಬಗಳಲ್ಲಿರುವ ಸಂಪ್ರದಾಯ ಆಚರಣೆಗಳ ಹೆಸರಿನಲ್ಲಿ ನಡೆಯುವ ನರಕ ಯಾತನೆಯ ಶಿಕ್ಷೆಯನ್ನು ಬಿಚ್ಚಿಡುವ ಪ್ರಯತ್ನವಾಗಿದೆ.

೮. ಮಹಿಳಾ ಕಥಾ ಸಾಹಿತ್ಯದಲ್ಲಿ ಕುಟುಂಬದಲ್ಲಿ ಬಾಲ್ಯವಿವಾಹ ಪದ್ಧತಿ, ಅತ್ಯಾಚಾರ, ವ್ರತ ಮತ್ತು ವರದಕ್ಷಣೆ ಹೀಗೆ ಆಧುನಿಕತೆಯಲ್ಲಿ ಬದಲಾವಣೆ ಕಂಡರೂ ಕೂಡಾ ಅವಳಿಗೆ ಈ ಸಂಪ್ರದಾಯದಿಂದ ಮುಕ್ತಿ ದೊರೆತಿಲ್ಲವೆಂಬುದನ್ನು ಗುರುತಿಸುವ ಉದ್ದೇಶ ಹೊಂದಿದೆ.

೯. ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿ ದಲಿತ-ಬಂಡಾಯ, ಮಹಿಳಾ ಮತ್ತು ಮುಸ್ಲಿಂ ಸಂವೇದನೆಗಳ ನೆಲೆಯಲ್ಲಿನ ವಿಚಾರಗಳನ್ನು ಹಂಬಲವನ್ನು ಹೊಂದಿದೆ.

೧೦.ಮಹಿಳಾ ಕಥಾ ಸಾಹಿತ್ಯದಲ್ಲಿನ ಆಯ್ದ ಲೇಖಕಿಯರ ಆಯಾ ಪ್ರಾದೇಶಿಕ ಭಾಷೆ, ಕಥೆ, ಕಥಾ ನಿರೂಪಣೆ, ಪಾತ್ರಚಿತ್ರಣ, ವಸ್ತು ಮತ್ತು ಶೈಲಿಯನ್ನು ಕಾಣುವ ಉದ್ದೇಶ ಹೊಂದಿದೆ.

ಅಧ್ಯಯನದ ವಿಧಾನ:

ಪ್ರತಿಯೊಂದು ಸಂಶೋಧನಾ ಅಧ್ಯಯನವು ಅದರದೇ ಆದ ಪ್ರತ್ಯೇಕ ವಿಧಾನವೊಂದನ್ನು ಅನುಸರಿಸಿಕೊಂಡು ರೂಪಿಸಲ್ಪಟ್ಟಿರುತ್ತದೆ. ಅದರಂತೆ ಈ ಅಧ್ಯಯನವೂ ವಿಶ್ಲೇಷಣಾತ್ಮಕ, ವಿಮರ್ಶಾತ್ಮಕ ವಿವರಣಾತ್ಮಕ ಹಾಗೂ ವ್ಯಕ್ತಿ ಅಧ್ಯಯನ ವಿಧಾನವನ್ನು ಒಳಗೊಂಡಿದೆ.

ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ:

ಇದುವರೆಗೆ ಕನ್ನಡ ಸಾಹಿತ್ಯದಲ್ಲಿ ಅನೇಕ ಸಂಶೋಧನೆಗಳು ನಡೆದಿವೆ. ಅದರಲ್ಲಿ ಮಹಿಳಾ ಕಥಾಸಾಹಿತ್ಯಕ್ಕೆ ಸಂಬಂಧಿಸಿದಂತೆ **ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ ಒಂದು ಅಧ್ಯಯನ** ಎಂಬ ವಿಷಯದಲ್ಲಿ ಡಾ. ಮಲ್ಲಿಕಾ ಘಂಟಿ ಅವರು ವೀರಣ್ಣ ರಾಜೂರ ಅವರ ಮಾರ್ಗದರ್ಶನದಲ್ಲಿ **೧೯೯೦** ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದಿದ್ದಾರೆ.

ವೀಣಾ ಶಾಂತೇಶ್ವರ ಬದುಕು ಬರಹ- ಎಂಬ ವಿಷಯದಲ್ಲಿ ಯಶೋಧಾ.ಅಂ ಜವಳಗೇರಿ ಅವರು ಡಾ. ಬಿ.ಬಿ. ಬಿರಾದಾರ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ **೨೦೦೩** ರಲ್ಲಿ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ.

ಸ್ವಾತಂತ್ರ್ಯೋತ್ತರ ಮಹಿಳಾ ಕಥನ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಗಳು– ಗೀತಾ ವಸಂತ (ಹೆಗಡೆ ಗೀತಾ.ಎಸ್) ಅವರು ಡಾ. ಶಾಲಿನಿ ರಘುನಾಥ ಅವರ ಮಾರ್ಗದರ್ಶನದಲ್ಲಿ ೨೦೦೩ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ.

ಅದರಂತೆ ಹಿಂದಿಯಲ್ಲಿ **ಮೃದುಲಾ ಗರ್ಗ್ ಮತ್ತು ವೀಣಾ ಶಾಂತೇಶ್ವರ ಒಂದು ತೌಲನಿಕ ಅಧ್ಯಯನ** ಎಂಬ ಶೀರ್ಷಿಕೆಯಡಿಯಲ್ಲಿ **೨೦೦೭** ರಲ್ಲಿ ಜಯಶ್ರೀ ಪಾಟೀಲ ಎಂಬುವರು ಎಸ್.ಎಸ್. ಮುಮ್ಮಿಗಟ್ಟಿ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಫಿಲ್ ಪದವಿಯನ್ನು ಪಡೆದಿದ್ದಾರೆ.

ಗೀತಾ ನಾಗಭೂಷಣ ಅವರ ಕಥೆ ಮತ್ತು ಕಾದಂಬರಿಗಳು– ಎಂಬ ವಿಷಯದಲ್ಲಿ ದ್ರಾಕ್ಷಾಯಣಿ ಗೊಬ್ಬರಗುಂಪಿ ಅವರು ಡಾ. ಶಾಂತಾ ಇಮ್ರಾಪುರ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ **೨೦೦೮** ರಲ್ಲಿ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ.

ನವ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ನೆಲೆಗಳು– ಎಂಬ ವಿಷಯದಲ್ಲಿ ಗಿರಿಜಾ ಟಿ. ಡಿ ಅವರು ವೆಂಕಟೇಶಮೂರ್ತಿ ಅವರ ಮಾರ್ಗದರ್ಶನದಲ್ಲಿ **೨೦೧೭** ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ.

ಸಾರಾ ಅಬೂಬಕ್ಕರ ಮತ್ತು ಫಕೀರ ಮಹಮ್ಮದ್ ಕಟ್ಪಾಡಿ ಅವರ ಸಾಹಿತ್ಯ ತೌಲನಿಕ ಅಧ್ಯಯನ– ಎಂಬ ವಿಷಯದಲ್ಲಿ ಪವಿತ್ರ. ಎ. ಎನ್ ಅವರು ಡಾ. ಪುಟ್ಟಸ್ವಾಮಿ ಅವರ ಮಾರ್ಗದರ್ಶನದಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ **೨೦೧೯** ರಲ್ಲಿ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ.

ಕನ್ನಡ ಮುಸ್ಲಿಂ ಲೇಖಕಿಯರ ಸಣ್ಣಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ನೆಲೆಗಳು– ಎಂಬ ವಿಷಯದಲ್ಲಿ ಸುಜಾತಾ ಮಹಾದೇವಪ್ಪ ಅವರು ಸುರೇಶ ಎಲ್ ಜಾದವ ಅವರ ಮಾರ್ಗದರ್ಶನದಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ **೨೦೨೦**ರಲ್ಲಿ ಪಿಎಚ್.ಡಿ ಪದವಿಯನನ್ನು ಪಡೆದಿದ್ದಾರೆ.

ಬಿ.ಟಿ ಲಲಿತಾ ನಾಯಕ ಮತ್ತು ಬಾನು ಮುಷ್ತಾಕ ಅವರ ಸಾಹಿತ್ಯ: ತೌಲನಿಕ ಅಧ್ಯಯನ– ಎಂಬ ವಿಷಯದಲ್ಲಿ ಪೂರ್ಣಿಮಾ. ಕೆ ಅವರು ಡಾ. ಎಂ. ನಂಜಯ್ಯ ಹೊಂಗನೂರು ಅವರ ಮಾರ್ಗದರ್ಶನದಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ **೨೦೨೦**ರಲ್ಲಿ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ.

ಜನಪದ ಸಾಹಿತ್ಯ: ಹಿಂಸೆ-ಅಹಿಂಸೆಯ ಸ್ತ್ರೀ ಕೇಂದ್ರಿತ ಕಥನ- ಧನಲಕ್ಷ್ಮೀ. ಐ. ಡಿ ಅವರು ಡಾ. ಮೋಗಳ್ಳಿ ಗಣೇಶ ಅವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ **೨೦೨೧** ರಲ್ಲಿ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ – ಎಂಬ ವಿಷಯದಲ್ಲಿ ದೇವಾಪೂರ ರಶ್ಮಿ ಅವರು ಡಾ. ಶಿವಗಂಗಾ ರುಮ್ಮಾ ಅವರ ಮಾರ್ಗದರ್ಶನದಲ್ಲಿ **೨೦೨೨** ರಲ್ಲಿ ಕೇಂದ್ರಿಯ ವಿಶ್ವವಿದ್ಯಾಲಯ ಕಡಗಂಚಿ (ಕಲಬುರಗಿ) ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ.

ಕನ್ನಡ ಮಹಿಳಾ ಕಥಾ ಸಾಹಿತ್ಯದಲ್ಲಿ ದಾಂಪತ್ಯದ ಪರಿಕಲ್ಪನೆ- ಎಂಬ ವಿಷಯದಲ್ಲಿ ಜ್ಯೋತಿ ಮೇಟಿ ಅವರು ಮಹೇಶ ಚಿಂತಾಮಣಿ ಅವರ ಮಾರ್ಗದರ್ಶನದಲ್ಲಿ **೨೦೨೨** ರಲ್ಲಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ- ಎಂಬ ವಿಷಯದಲ್ಲಿ ದೇವಾಪುರ ರಶ್ಮಿ ಅವರು ರುಮ್ಮಾ ಶಿವಗಂಗಾ ಇವರ ಮಾರ್ಗದರ್ಶನದಲ್ಲಿ **೨೦೨೨**ರಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಕಡಗಂಚಿ(ಕಲಬುರಗಿ) ಪಿಎಚ್.ಡಿ ಪಡೆದಿದ್ದಾರೆ.

ವೀಣಾ ಶಾಂತೇಶ್ವರ ಅವರ ಬದುಕು ಬರಹ ಎಂಬ ಮಹಾಪ್ರಬಂಧದಲ್ಲಿ ವೀಣಾ ಅವರ ಜೀವನ ಮತ್ತು ಸಾಹಿತ್ಯ, ಕಥಾ ಸಾಹಿತ್ಯ, ಕಥೆಗಳ ಸಮೀಕ್ಷೆ, ಸ್ತ್ರೀ ಶೋಷಣೆಯ ಕಥೆಗಳ ಕುರಿತ ಅಧ್ಯಯನವಿದೆ. **ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಗಳು** ಎಂಬ ಮಹಾಪ್ರಬಂಧದದಲ್ಲಿ ಸ್ತ್ರೀವಾದದ ತಾತ್ವಿಕತೆ, ಭಾರತೀಯ ಸ್ತ್ರೀವಾದ, ಪುರುಷಪ್ರಧಾನ ವ್ಯವಸ್ಥೆ-ದಮನ ಮತ್ತು ಪ್ರತಿಭಟನೆ ಮನೋಲೈಂಗಿಕ, ಕೌಟುಂಬಿಕ, ಸಾಮಾಜಿಕ ಹಾಗೂ ಆರ್ಥಿಕ ನೆಲೆ ಕುರಿತ, ಅಸ್ತಿತ್ವದ ನೆಲೆಗಳ ಹುಡುಕಾಟ, ಮನೋಲೈಂಗಿಕ ನೆಲೆಯಲ್ಲಿ ಹೆಣ್ತನದ ಹುಡುಕಾಟ, ಸಾಮಾಜೀಕರಣದ- ಸಾಂಸ್ಕೃತಿಕರಣದ ಹಿನ್ನೆಲೆಯಲ್ಲಿ ಅಸ್ತಿತ್ವದ ನೆಲೆ, ಅನನ್ಯತೆಯ ಅರಿವು ಮತ್ತು ಅಭಿವ್ಯಕ್ತಿ ಈ ಪ್ರಮುಖ ಅಂಶಗಳ ಆಧಾರದ ಮೇಲೆ ಕನ್ನಡ ಮಹಿಳಾ ಕಥೆಗಾರ್ತಿಯರು, ಕಥೆಗಳನ್ನು ಕುರಿತ ಅಧ್ಯಯನವಿದೆ. **ನವ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ನೆಲೆಗಳು** ಎಂಬ ಮಹಾಪ್ರಬಂಧದಲ್ಲಿ ಕುಟುಂಬ ಮತ್ತು ಸಮಾಜದ ಹಿನ್ನೆಲೆಯಲ್ಲಿ ಹೆಣ್ಣಿನ ಪರಿಕಲ್ಪನೆ, ವೈವಾಹಿಕ ಸಂಬಂಧ, ಕೌಟುಂಬಿಕ, ಸಾಮಾಜಿಕ, ಧಾರ್ಮಿಕ ನೆಲೆ, ಮಹಿಳಾ ಬದುಕಿನ ಸ್ಥಿತ್ಯಂತರಗಳು, ಕೌಟುಂಬಿಕ ಹಿನ್ನೆಲೆಯಲ್ಲಿ ಮಹಿಳಾ ಕಥಾ ಸಾಹಿತ್ಯದ ಹಿನ್ನೆಲೆಯಲ್ಲಿ ಅಧ್ಯಯನವಿದೆ. **ಬಿ.ಟಿ ಲಲಿತಾ**

ನಾಯಕ ಮತ್ತು ಬಾನು ಮುಷ್ತಾಕ ಅವರ ಸಾಹಿತ್ಯ: ತೌಲನಿಕ ಅಧ್ಯಯನ ಎಂಬ ಮಹಾಪ್ರಬಂಧದಲ್ಲಿ ಕನ್ನಡ ಮಹಿಳಾ ಸಾಹಿತ್ಯದ ಹಿನ್ನೆಲೆ, ಪ್ರೇರಣೆ, ಪ್ರಭಾವ, ದಲಿತ-ಮುಸ್ಲಿಂ ಮಹಿಳಾ ಸಂವೇದನೆಗಳ ಒಳನೋಟ, ಲಲಿತಾ ನಾಯಕ ಮತ್ತು ಬಾನು ಮುಷ್ತಾಕ ಅವರ ಕಥೆಗಳಲ್ಲಿ ಸ್ತ್ರೀಚಿಂತನೆಗಳ ಕುರಿತು ಅಧ್ಯಯನವಿದೆ. **ಕನ್ನಡ ಮಹಿಳಾ ಕಥಾ ಸಾಹಿತ್ಯದಲ್ಲಿ ದಾಂಪತ್ಯದ ಪರಿಕಲ್ಪನೆ** ಎಂಬ ಮಹಾಪ್ರಬಂಧದಲ್ಲಿ ಕೌಟುಂಬಿಕ ನೆಲೆ ಹಾಗೂ ಮಹಿಳಾ ಕಥಾ ಸಾಹಿತ್ಯದಲ್ಲಿ ದಾಂಪತ್ಯದ ಚಿತ್ರಣದ ಕುರಿತು ಅಧ್ಯಯನವಿದೆ.

ಮಹಿಳಾ ಕಥಾ ಸಾಹಿತ್ಯದ ಕುರಿತ ಅಧ್ಯಯನಗಳಲ್ಲಿ ವ್ಯಕ್ತವಾಗಿರುವ ವಿಚಾರಗಳನ್ನು ಗಮನಿಸಿದಾಗ ಇದುವರೆಗೂ ಮಹಿಳಾ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿನ್ನೆಲೆಯಲ್ಲಿ ಹಿಂಸೆಯ ಸ್ವರೂಪ ಕುರಿತು ಅಧ್ಯಯನಗಳು ಆಗಿರದೇ ಇದ್ದ ಕಾರಣ ಈ ಅಧ್ಯಯನವನ್ನು ಮಾಡಲಾಗಿದೆ.ಸ

ಅಧ್ಯಾಯ-೧

ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯ: ಒಂದು ಅವಲೋಕನ

ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯ ಎಂಬುದು ಈ ಸಂಶೋಧನೆಯ ಮೊದಲ ಅಧ್ಯಾಯವಾಗಿದೆ. ಈ ಅಧ್ಯಾಯದಲ್ಲಿ ಕಥಾ ಸಾಹಿತ್ಯದಲ್ಲಿ ಮಹಿಳೆ, ಮಹಿಳಾ ಕಥಾ ಸಾಹಿತ್ಯದ ಇತಿಹಾಸ, ಹಿನ್ನೆಲೆ, ಮಹಿಳಾ ಕಥಾ ಸಾಹಿತ್ಯದ ವೈಶಿಷ್ಟ್ಯತೆಗಳು ಹಾಗೂ ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯದ ಸ್ಥೂಲ ಸಮೀಕ್ಷೆ ಕುರಿತು ಅಧ್ಯಯನ ಮಾಡಲಾಗಿದೆ. ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯೋತ್ತರ, ನವೋದಯ ಪೂರ್ವ, ನವೋದಯ, ಪ್ರಗತಿಶೀಲ-ನವ್ಯ, ಬಂಡಾಯ-ದಲಿತ, ಮಹಿಳಾ ಸಾಹಿತ್ಯದಲ್ಲಿ ಕೌಟುಂಬಿಕ ನೆಲೆಯಲ್ಲಿನ ಚಿತ್ರಣವನ್ನು ಅವಲೋಕನ ಮಾಡಲಾಗಿದೆ.

ಅಧ್ಯಾಯ- ೨

ಪ್ರಾತಿನಿಧಿಕ ಕಥೆಗಾರ್ತಿಯರ ಜೀವನ ಮತ್ತು ಸಾಹಿತ್ಯ

ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯ ಕೌಟುಂಬಿಕ ಹಿಂಸೆಯ ಸ್ವರೂಪ ಎಂಬ ಎರಡನೆಯ ಅಧ್ಯಾಯದಲ್ಲಿ ಪ್ರಾತಿನಿಧಿಕ ಲೇಖಕಿಯರ ಜೀವನ ಮತ್ತು ಸಾಹಿತ್ಯ ಕುರಿತು ಅಧ್ಯಯನ

ಮಾಡಲಾಗಿದೆ. ಇಲ್ಲಿ ಸಾರಾ ಅಬೂಬಕ್ಕರ, ಗೀತಾ ನಾಗಭೂಷಣ, ಬಿ.ಟಿ. ಲಲಿತಾ ನಾಯಕ, ವೀಣಾ ಶಾಂತೇಶ್ವರ ಮತ್ತು ಬಾನು ಮುಷ್ತಾಕ ಅವರ ಜೀವನ ಮತ್ತು ಸಾಹಿತ್ಯಿಕ ಕೊಡುಗೆಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ. ಕೌಟುಂಬಿಕ ಹಿನ್ನೆಲೆ, ವೈವಾಹಿಕಜೀವನ, ವೃತ್ತಿಜೀವನ, ಸಾಹಿತ್ಯಾಸಕ್ತಿ, ಸಾಹಿತ್ಯಿಕ ಪ್ರೇರಣೆ, ಸಾಹಿತ್ಯಿಕ ಕೊಡುಗೆಗಳು, ಗೌರವ ಪುರಸ್ಕಾಗಳು ಮತ್ತು ಜೀವನದಲ್ಲಿ ಅನುಭವಿಸಿದ ನೈಜ ಚಿತ್ರಣವನ್ನು ಅವರ ಸಾಹಿತ್ಯದಲ್ಲಿ ಹೇಗೆ ಭಿನ್ನವಾಗಿ ನಿರೂಪಿಸಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ– ೩

ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯ: ಕೌಟುಂಬಿಕ ಹಿಂಸೆ

ಈ ಅಧ್ಯಾಯದಲ್ಲಿ ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯ ಕೌಟುಂಬಿಕ ಹಿಂಸೆಯ ಅರ್ಥ, ಪರಿಕಲ್ಪನೆ ಹಾಗೂ ಸ್ವರೂಪ, ಕುಟುಂಬದಲ್ಲಿ ಹೆಣ್ಣಿನ ಪರಿಕಲ್ಪನೆ, ಕುಟುಂಬದಲ್ಲಿ ಹೆಣ್ಣಿನ ಮೇಲಾಗುವ ದೈಹಿಕ, ಆರ್ಥಿಕ, ಮಾನಸಿಕ ಮತ್ತು ಲೈಂಗಿಕ ಹಿಂಸೆಯು ಹೇಗೆ ಕಂಡುಬಂದಿದೆ ಎಂಬ ಸೂಕ್ಷ್ಮತೆಯನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ– ೪

ಸಾರಾ ಅಬೂಬಕ್ಕರ ಅವರ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆ

ಸಾರಾ ಅಬೂಬಕ್ಕರ ಅವರ ಕಥಾಸಂಕಲನಗಳನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಂಡಿದ್ದು ಈ ಅಧ್ಯಾಯದಲ್ಲಿ ಕಥಾ ಸಾಹಿತ್ಯದಲ್ಲಿನ ಸ್ತ್ರೀ ಪಾತ್ರಗಳಲ್ಲಿ ಕೌಟುಂಬಿಕ ಹಿಂಸೆಯ ಚಿತ್ರಣವನ್ನು ಗುರುತಿಸುವದಾಗಿದೆ. ಅಧ್ದರಿಂದ ಅವರ ಚಪ್ಪಲಿಗಳು– ಈ ಕಥಾಸಂಕಲನದಲ್ಲಿ ಒಟ್ಟು ೧೯ ಕಥೆಗಳು(೧೯೮೯), ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು(೧೯೯೨), ಪಯಣ ಮತ್ತು ಇತರ ಕಥೆಗಳು(೧೯೯೨), ಸುಮಯ್ಯಾ(೨೦೦೪), ಗಗನಸಖಿ– ೯ ಕಥಗಳು(೨೦೦೭) ಮತ್ತು ಖೆಡ್ಡ ಕಥೆಗಳಲ್ಲಿನ ಸ್ತ್ರೀ ಪಾತ್ರಗಳನ್ನು, ಕಥಾವಸ್ತು, ಆಶಯ, ಪಾತ್ರಚಿತ್ರಣವನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ– ೫

ಗೀತಾ ನಾಗಭೂ.ಷಣ ಅವರ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆ

ಗೀತಾ ನಾಗಭೂಷಣ ಅವರ ಅವ್ವ ಮತ್ತು ಇತರ ಕಥಗಳು ಎಂಬ ಕಥಾಸಂಕಲನದಲ್ಲಿ ಒಟ್ಟು ೮ ಕಥಗಳಿವೆ. ಪುಂಡಿ ಪೂಜಾರಿಯಾದಾಗ, ಮತ್ತೆ ಅದೇ ಕಥೆ, ಅವ್ವ, ಬಂದ್, ಥಾಲು, ಚಿತ್ತಿ

ಮತ್ತು ರಿಕ್ಷಾ, ದುರಂತ ಮತ್ತು ಬೆಳಕಿನೆಡೆಗೆ ಎಂಬ ಕಥೆಗಳಿವೆ. ಜ್ವಲಂತ ಕಥಾಸಂಕಲನದಲ್ಲಿ ಜಲ್ವಂತ, ಗರ್ಭ, ಗೌಡನ ಗೋಲಿ, ವೇದನೆಯ ವರ್ತುಲ, ಬೇಲಿ, ಸತ್ತ ಹೆಣ್ಣಿನ ಸುತ್ತ ಮತ್ತು ನೀರು ಮತ್ತು ನೆತ್ತರು ಈ ಕಥೆಗಳಲ್ಲಿ ಶೂದ್ರ ಜಗತ್ತಿನ, ಅಮಾಯಕ, ಅನಕ್ಷರಸ್ಥ ಮಹಿಳೆಯರ ಶೋಷಣೆ, ನೋವು ಬಂಡಾಯಗಳೇ ಇವರ ಕಥೆಗಳಲ್ಲಿನ ಕಥಾ ವಸ್ತುಗಳಾಗಿವೆ. ಅಲ್ಲದೇ ಇದ್ದದ್ದನ್ನು ಇದ್ದಂತೆಯೇ ಬರೆಯುವ ಛಾತಿವಂತಿಕೆಯೇ ಗೀತಾ ಅವರ ಕಥೆಗಳಲ್ಲಿನ ಕೌಟುಂಬಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು.

ಅಧ್ಯಾಯ– ೬

ಬಿ.ಟಿ. ಲಲಿತಾ ನಾಯಕ ಅವರ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆ

ಕನ್ನಡ ಕಥಾ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಸೃಷ್ಟಿಸಿಕೊಂಡಿರುವ ಜನಪ್ರಿಯ ಲೇಖಕಿ ಬಿ.ಟಿ. ಲಲಿತಾ ನಾಯಕ. ಇವರ ಹಬ್ಬ ಮತ್ತು ಬಲಿ ಕಥಾಸಂಕಲನದಲ್ಲಿ ಸ್ತ್ರೀ ದೃಷ್ಟಿಕೋನದಿಂದ ಕಂಡುಬಂದಿರುವ ಕೌಟುಂಬಿಕ ಹಿಂಸೆಯ ಚಿತ್ರಣವನ್ನು ಅಧ್ಯಯನ ಮಾಡಲಾಗಿದೆ. ಈ ಕಥಾಸಂಕಲನದಲ್ಲಿ ಒಟ್ಟು ೧೭ ಕಥೆಗಳವೆ. ಲೂಟಿ, ಉಪಚಾರ, ಗಾಂಧಿ, ಗುಂಡು ಮತ್ತು ಸಾವು ಇತ್ಯಾದಿ, ತಾಯಿ ಸಾಕೀಬಾಯಿ, ಕೊಲೆ, ಕಳ್ರು, ಮರುಮದುವೆ, ಸುದ್ಧಿ, ಉಣ್ಣಲುಂಟು ಉಡಲುಂಟು, ಮಾನ, ಹಬ್ಬ ಮತ್ತು ಬಲಿ, ತಾಂಡಾಯಣ, ಸಂಗವ್ವನ ಮನಿ, ಕುಶಲ ಕರ್ಮಿ, ಅವಳು ನಾನು ಮತ್ತು ಕನ್ನಡಿ, ಎನ್ನ ಮನ್ನಿಸೋ... ಮತ್ತು ಮೂರು ಕಾಸಿನ ಹೆಣ್ಣು ಎಂಬ ಕಥೆಗಳಲ್ಲಿನ ಮಹಿಳಾ ಕೌಟುಂಬಿಕ ಹಿಂಸೆಯ ಅಸ್ಮಿತೆಯ ಗ್ರಹಿಕೆಯನ್ನು, ಪಾತ್ರಚಿತ್ರಣವನ್ನು ವಿಭಿನ್ನವಾಗಿ ಅಧ್ಯಯನ ಮಾಡುವುದು.

ಅಧ್ಯಾಯ– ೭

ವೀಣಾ ಶಾಂತೇಶ್ವರ ಅವರ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆ

ಕನ್ನಡ ಸಣ್ಣಕಥೆಗೆ ಹೊಸ ಆಯಾಮವನ್ನು ತಂದು ಕೊಟ್ಟಿರುವ ಶ್ರೇಷ್ಠ ಕಥೆಗಾರ್ತಿ. ಹೆಣ್ಣು– ಗಂಡಿನ ಒಳತೋಟಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಅವರ ಮುಳ್ಳುಗಳು(೧೯೬೮) ಕಥಾಸಂಕಲನದಲ್ಲಿ ಒಟ್ಟು ೦೫ ಕಥೆಗಳಿವೆ. ಅಥಿತಿ, ಪ್ರಶ್ನೇ, ನೆನಪು... ಬರಿ ನೆನಪು ಮತ್ತು ನೀನೇ ತಂತಿ.

ಕೊನೆಯ ದಾರಿ(೧೯೭೨) ಈ ಕಥಾಸಂಕಲನದಲ್ಲಿ ಕೊನೆಯ ದಾರಿ, ಹೆಣ, ಮಳೆ ಬಂದಾಗ, ನೆರಳು, ಮುಕ್ತಿ ಮತ್ತು ಹೊರಟುಹೋದನು ಎಂಬ ೦೬ ಕಥೆಗಳಿವೆ. ಕವಲು(೧೯೭೬) ಕಥಾಸಂಕಲನದಲ್ಲಿ ಕವಲು, ಒಂದು ರವಿವಾರ, ಹನುಮಾಪೂರದಲ್ಲಿ ಹನುಮಜಯಂತಿ, ಹೋಟೆಲ ಬ್ಲೂ, ಅವಳ ಸ್ವತಂತ್ರ್ಯ ಮತ್ತು ಮರ್ಯಾದೆ ಎಂಬ ೬ ಕಥಗಳಿವೆ. ಹಸಿವು(೧೯೮೪) ಕಥಾಸಂಕಲನದಲ್ಲಿ ಕಾಯತ್ತಲಿದ್ದ ಕರಿಯ, ತಿರುಗಿ ಹೋದಳು ಒಟ್ಟು ಎರಡು ಕಥೆಗಳಿವೆ. ಬಿಡುಗಡೆ(೧೯೯೪) ಕಥಾಸಂಕಲನದಲ್ಲಿ ಬಿಡುಗಡೆ, ಹೀಗೊಂದು ಕತೆ, ಅನಾಥೆ, ನಿರಾಕರಣೆ, ರಾಧವ್ವ, ಒಲವೇ ಜೀವನ, ತಾರಾ ಮ್ಯಾಡಮ್ ಮತ್ತು ತತ್ವಗಳು, ದ.ಬಾ. ಕ್ರಿಷ್ಣಪ್ಪ, ಮರೀಚಿಕೆ ಮತ್ತು ಧೈರ್ಯದ ಮನುಷ್ಯಇ೨೧ ಎಂಬ ಒಟ್ಟು ಕಥೆಗಳಿವೆ. ಇವರ ಕಥೆಗಳಲ್ಲಿನ ಕೌಟುಂಬಿಕ ಹಿಂಸೆಯ ಕಥಾ ವಸ್ತು, ಕೌಟುಂಬಿಕ ಹಿಂಸೆಯ ಚಿತ್ರಣವನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ– ೮

ಬಾನು ಮುಷ್ತಾಕ ಅವರ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆ

ಬಾನು ಮುಷ್ತಾಕ ಅವರ ಹೆಜ್ಜೆ ಮೂಡಿದ ಹಾದಿ, ಬೆಂಕಿ ಮಳೆ, ಎದೆಯ ಹಣತೆ, ಸಫೀರಾ ಮತ್ತು ಬಡವರ ಮಗಳು ಹೆಣ್ಣಲ್ಲ ಎಂಬ ಕಥಾಸಂಕಲಗಳಲ್ಲಿ ಮಹಿಳಾ ಕೌಟುಂಬಿಕ ಹಿಂಸೆಯ ವಿಭಿನ್ನ ಮೂಲಗಳನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ– ೯

ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ಹಿಂಸೆ: ತೌಲನಿಕ ನೋಟ

ಪ್ರಾತಿನಿಧಿಕ ಕಥೆಗಾರ್ತಿಯರ ಕಥಾಸಂಕಲನಗಳನ್ನು ಆಯ್ದುಕೊಂಡು ಆಯಾ ಕತೆಗಾರ್ತಿಯರ ಕತೆಗಳಲ್ಲಿ ವ್ಯಕ್ತವಾಗಿರುವ ಭಾಷೆ, ನಿರೂಪಣಾ ಶೈಲಿ, ವ್ಯಕ್ತಿಗತ ಭಿನ್ನತೆ, ವಾಸ್ತವಿಕತೆಯ ನೈಜತೆಯ ಚಿತ್ರಣವನ್ನು ಅಧ್ಯಯನ ಮಾಡಲಾಗಿದೆ. ಕಥೆಗಾರ್ತಿಯರ ಅನುಭವಗಳು ಅವರವರ ಬರಹದ ಭಿನ್ನತೆಯನ್ನು ಗುರುತಿಸುತ್ತವೆ. ಈ ಹಿನ್ನೆಲೆಯಲ್ಲಿ ಲೇಖಕಿ, ಕತೆಗಳ ಕುರಿತು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ.

ಮುಂದಿನ ಅಧ್ಯಯನದ ಸಾಧ್ಯತೆಗಳು:

ಈ ಶೀರ್ಷಿಕೆಯ ಸಂಶೋಧನ ಅಧ್ಯಯನದ ನಂತರ ಮುಂದಿನ ಅಧ್ಯಯನದ ಸಾಧ್ಯತೆಗಳನ್ನು ದಾಖಲಿಸಲಾಗುವುದು.

ಸಮಾರೋಪ:

ಈ ಸಂಶೋಧನ ಪ್ರಬಂಧದ ಕೊನೆಯಲ್ಲಿ ಸಮಾರೋಪವನ್ನು ಇರುವುದು. ಈ ಸಂಶೋಧನೆಯಲ್ಲಿ ಕಂಡುಕೊಂಡ ಫಲಿತಗಳನ್ನು ಇಲ್ಲಿ ವಿವರಿಸಲಾಗುವುದು. ಅದರ ಜೊತೆಗೆ ಮುಂದಿನ ಅಧ್ಯಯನದ ಸಾಧ್ಯತೆಗಳನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಲಾಗುವುದು. ಸ್ವಾತಂತ್ರ್ಯೋತ್ತರ ಮಹಿಳಾ ಕಥಾಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ ಎಂಬ ಅಧ್ಯಯನದ ಮೂಲಕ ದೊರೆತ ಫಲಿತಗಳ ಬಗ್ಗೆ ಇಲ್ಲಿ ವಿಶ್ಲೇಷಿಸಲಾಗುವುದು.

ಪುರುಷಪ್ರಧಾನ ಭಾರತೀಯ ಸಮಾಜದಲ್ಲಿ ಮಹಿಳೆಗೆ ಪರಿಪೂರ್ಣವಾದ ಸ್ವಾತಂತ್ರ್ಯ ಹಾಗೂ ಸಮಾನತೆಗಳಿಲ್ಲದೇ ಅವನ ಆಶಯ, ಅವಶ್ಯಕತೆಗೆ, ಅನಿವಾರ್ಯತೆಗೆ ತಕ್ಕಂತೆ ಬದುಕುತ್ತ ಬಂದ ಮಹಿಳೆ ಇಂದಿಗೂ ಎರಡನೆಯ ದರ್ಜೆಯ ಪ್ರಜೆಯಾಗಿಯೇ ಗುರುತಿಸಿಕೊಂಡಿದ್ದಾಳೆ. ಅವಳು ರೂಪಿಸಿದ ಸಾಹಿತ್ಯವನ್ನು ಕೂಡಾ ಅದೇ ದೃಷ್ಟಿಯಿಂದ ನೋಡಲಾಗುತ್ತದೆ. ಸ್ವಾತಂತ್ರ್ಯೋತ್ತರ ಕನ್ನಡ ಮಹಿಳಾ ಕಥಾ ಸಾಹಿತ್ಯದ ಸಂದರ್ಭದಲ್ಲಿ ಮೂಡಿದ ಕೌಟುಂಬಿಕ ಹಿಂಸೆಯ ಹಿನ್ನೆಲೆಯಲ್ಲಿ ದೈಹಿಕ, ಆರ್ಥಿಕ, ಮಾನಸಿಕ, ಲೈಂಗಿಕ ಹಿಂಸೆ ಮತ್ತು ಸ್ತ್ರೀವಾದಿ ಪ್ರಜ್ಞೆ, ಹೆಣ್ಣನ್ನು ಅರ್ಥಮಾಡಿಕೊಳ್ಳುತ್ತಲೇ ಹೆಣ್ಣಿನ ಕಣ್ಣಿನಲ್ಲಿ ಸಂಸ್ಕೃತಿ, ಸಮಾಜಗಳನ್ನು ಕಂಡ ಬಗೆಯನ್ನು ಇಲ್ಲಿ ಸಾರರೂಪದಲ್ಲಿ ಸಂಗ್ರಹಿಸಲಾಗಿದೆ.

ಅಧ್ಯಯನದ ಫಲಿತಗಳು:

ಅಧ್ಯಯನದ ನಂತರ ಈ ಕೆಳಗಿನ ಫಲಿತಗಳನ್ನು ಕಾಣುವ ಮಹಾದಾಸೆಯನ್ನು ನಿರೀಕ್ಷಿಸಲಾಗಿದೆ.

೧. ಕನ್ನಡ ಸಾಹಿತ್ಯಕ್ಕೆ ಅಧ್ಯಯನಕ್ಕೆ ಒಳಪಡಿಸಿದ ಲೇಖಕಿಯರ ಕಥನ ಸಾಹಿತ್ಯದಲ್ಲಿನ ಮಹಿಳಾಪರ ಚಿಂತನೆಗಳನ್ನು ಕಾಣುವುದು.

೨. ಆಯಾ ಲೇಖಕಿಯರ ಕಥೆಗಳಲ್ಲಿ ವ್ಯಕ್ತವಾದ ಕೌಟುಂಬಿಕ ಹಿಂಸೆಯ ವಿಭಿನ್ನ ನೆಲೆಗಳನ್ನು ನಿರೂಪಿಸುವುದು.

೩. ಮಹಿಳಾ ಕಥಾ ಸಾಹಿತ್ಯದ ಅಧ್ಯಯನದಿಂದ ಕೌಟುಂಬಿಕ ಪ್ರಜ್ಞೆಯ ನಾನಾ ರೂಪಗಳನ್ನು ಕಂಡುಕೊಂಡಿದೆ.

೪. ಕುಟುಂಬದ ಕಟ್ಟುಪಾಡುಗಳು, ಬದ್ಧತೆಗಳಿಗೆ ಬಲಿಯಾಗದೇ ಅವುಗಳ ವಿರುದ್ಧ ಧ್ವನಿಯೆತ್ತುವ ಮಾತುಗಳನ್ನು ಬರಹದಲ್ಲಿ ಹುಡುಕುವುದು.

೫. ಆಯ್ದ ಲೇಖಕಿಯರ ಕಥಾ ಶೈಲಿ, ನಿರೂಪಣೆ, ಕಥಾವಸ್ತು, ಕಥೆಗಳಲ್ಲಿರುವ ಕತೆಗಾರ್ತಿಯರ ಪ್ರಾದೇಶಿಕ ಭಾಷೆಯನ್ನು ವಿಶ್ಲೇಷಿಸುವುದು.

ಅನುಬಂಧ

ಅ. ಆಕರ ಗ್ರಂಥಗಳು

೧. ಅವ್ವ ಮತ್ತು ಇತರ ಕಥೆಗಳು- ಗೀತಾ ನಾಗಭೂಷಣ

೨. ಜ್ವಲಂತ- ಗೀತಾ ನಾಗಭೂಷಣ

೩. ಹಬ್ಬ ಮತ್ತು ಬಲಿ- ಬಿ. ಟಿ. ಲಲಿತಾ ನಾಯಕ (೧೯೮೯)

೪. ಚಪ್ಪಲಿಗಳು- ಸಾರಾ ಅಬೂಬಕ್ಕರ (೧೯೮೯)

೫. ಪಯಣ ಮತ್ತು ಇತರ ಕಥೆಗಳು- ಸಾರಾ ಅಬೂಬಕ್ಕರ (೧೯೯೨)

೬. ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು- ಸಾರಾ ಅಬೂಬಕ್ಕರ (೧೯೯೨)

೭. ಖೆಡ್ಡ- ಸಾರಾ ಅಬೂಬಕ್ಕರ(

೮. ಸುಮಯ್ಯಾ- ಸಾರಾ ಅಬೂಬಕ್ಕರ (೨೦೦೪)

೯. ಗಗನಸಖಿ- ಸಾರಾ ಅಬೂಬಕ್ಕರ (೨೦೦೭)

೧೦. ಮುಳ್ಳುಗಳು- ವೀಣಾ ಶಾಂತೇಶ್ವರ (೧೯೬೮)

೧೧. ಕೊನೆಯ ದಾರಿ- ವೀಣಾ ಶಾಂತೇಶ್ವರ (೧೯೭೨)

೧೨. ಕವಲು- ವೀಣಾ ಶಾಂತೇಶ್ವರ (೧೯೭೬)

೧೩. ಹಸಿವು- ವೀಣಾ ಶಾಂತೇಶ್ವರ (೧೯೮೪)

೧೪. ಬಿಡುಗಡೆ- ವೀಣಾ ಶಾಂತೇಶ್ವರ (೧೯೯೪)

೧೫. ಹೆಜ್ಜೆ ಮೂಡಿದ ಹಾದಿ- ಬಾನು ಮುಷ್ತಾಕ

೧೬. ಬೆಂಕಿ ಮಳೆ- ಬಾನು ಮುಷ್ತಾಕ

೧೭. ನಡೆದದ್ದೇ ದಾರಿ– ಡಾ ವೀಣಾ ಶಾಂತೇಶ್ವರ, ಸುಂದರ ಪ್ರಕಾಶನ, ಧಾರವಾಡ(೨೦೦೬)

೧೮. ಎದೆಯ ಹಣತೆ– ಬಾನು ಮುಷ್ತಾಕ

೧೯. ಸಫೀರಾ– ಬಾನು ಮುಷ್ತಾಕ

೨೦. ಬಡವರ ಮಗಳು ಹೆಣ್ಣಲ್ಲ– ಬಾನು ಮುಷ್ತಾಕ

೨೧. ಡಾ. ಸಾರಾ ಅಬೂಬಕ್ಕರ್: ಸಾರಾ ಅಬೂಬಕ್ಕರ್ ಅವರ ಸಮಗ್ರ ಕತೆಗಳು (ಭಾಗ–2)

ಆ. ಪರಾಮರ್ಶನ ಗ್ರಂಥಗಳು

೧ ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ: ಸಣ್ಣಕಥೆ– ಡಾ ವಿಜಯಶ್ರೀ ಸಬರದ ೨೦೦೩

೨ ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ; ವಿಚಾರ ಸಾಹಿತ್ಯ – ಡಾ ವಿಜಯಶ್ರೀ ಸಬರದ, ತಾರಿಣಿ ಶುಭದಾಯಿನಿ ೨೦೧೩

೩ ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ– ಡಾ. ಶಕುಂತಲಾ ದುರಗಿ, ೧೯೯೯

೪ ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ– ಡಾ ಮಲ್ಲಿಕಾ ಘಂಟಿ, ೧೯೯೪

೫ ಕನ್ನಡ ಕಥನ ಸಾಹಿತ್ಯ: ಸಣ್ಣಕತೆ– ಜಿ.ಎಸ್. ಆಮೂರ, ೨೦೦೦

೬ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆ ಸ್ವರೂಪ– ಸಂ. ಬರಗೂರು ರಾಮಚಂದ್ರಪ್ಪ, ೧೯೯೩

೭ ತೆಂಕಣ ನುಡಿಗಳಲ್ಲಿ ಸ್ತ್ರೀವಾದಿ ಸಂಕಥನ– ಡಾ ವಿನಯಾ ಒಕ್ಕುಂದ, ೨೦೦೬

೮ ಬಂಡಾಯ ಸಾಹಿತ್ಯ ಸಂವೇದನೆ– ಡಾ. ರಂಗರಾಜ ವನದುರ್ಗ, ೨೦೦೨

೯ ಬೊಗಸೆ (ಮಹಿಳೆ ಸುತ್ತ–ಮುತ್ತ)– ಡಾ. ಕಮಲಾ ಹಂಪನಾ, ೨೦೦೩

೧೦ ಮಹಿಳಾ ಸಾಹಿತ್ಯ ಅಭಿವ್ಯಕ್ತಿಕ್ರಮದ ತಾತ್ವಿಕ ಸ್ವರೂಪ– ಡಾ. ಟಿ.ಎಂ ಉಷಾರಾಣಿ, ೨೦೧೯

೧೧ ಯುಗಧರ್ಮ ಹಾಗೂ ಸಾಹಿತ್ಯ ದರ್ಶನ– ಕೀರ್ತಿನಾಥ ಕುರ್ತಕೋಟಿ, ೨೦೨೧

೧೨ ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ– ಸಾರಾ ಅಬೂಬಕ್ಕರ, ೨೦೦೭

೧೩ ಸ್ತ್ರೀಸಂವೇದನೆಯಲ್ಲಿ ಕನ್ನಡ ಕಥನ– ಎಲ್.ಜಿ. ಮೀರಾ, ೨೦೦೪

೧೪ ಸಂಕೀರ್ಣ ಸಂಕಲನಗಳು: ಮಹಿಳಾ ಸಣ್ಣಕಥೆಗಳು, ೨೦೧೩

೧೫ ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ ಒಂದು ಅಧ್ಯಯನ– ಡಾ. ಮಲ್ಲಿಕಾ ಘಂಟಿ, ೧೯೯೦

೧೬ ವೀಣಾ ಶಾಂತೇಶ್ವರ ಬದುಕು ಬರಹ– ಯಶೋಧಾ. ಅಂ ಜವಳಗೇರಿ, ೨೦೦೩ (ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ)

೧೭ ಸ್ವಾತಂತ್ರ್ಯೋತ್ತರ ಮಹಿಳಾ ಕಥನ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಗಳು- ಡಾ. ಗೀತಾ ವಸಂತ,

೧೮ ಮೃದುಲಾ ಗರ್ಗ್ ಮತ್ತು ವೀಣಾ ಶಾಂತೇಶ್ವರ ಒಂದು ತೌಲನಿಕ ಅಧ್ಯಯನ (ಹಿಂದಿ)- ಜಯಶ್ರೀ ಪಾಟೀಲ- ೨೦೦೭ (ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ)

೧೯ ಗೀತಾ ನಾಗಭೂಷಣ ಅವರ ಕಥೆ ಮತ್ತು ಕಾದಂಬರಿಗಳು- ದ್ರಾಕ್ಷಾಯಿಣಿ ಗೊಬ್ಬರಗುಂಪಿ, ೨೦೦೮ (ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ)

೨೦ ನವ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿ ಕೌಟುಂಬಿಕ ನೆಲೆಗಳು- ಗಿರಿಜಾ ಟಿ. ಡಿ ೨೦೧೭ (ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ)

೨೧ ಸಾರಾ ಅಬೂಬಕ್ಕರ ಮತ್ತು ಫಕೀರ ಮಹಮ್ಮದ್ ಕಟ್ಪಾಡಿ ಅವರ ಸಾಹಿತ್ಯ ತೌಲನಿಕ ಅಧ್ಯಯನ- ೨೦೧೯ (ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ)

೨೨ ಕನ್ನಡ ಮುಸ್ಲಿಂ ಲೇಖಕಿಯರ ಸಣ್ಣಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ನೆಲೆಗಳು- ಸುಜಾತಾ ಮಹಾದೇವಪ್ಪ, ೨೦೨೦ (ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ)

೨೩ ಬಿ ಟಿ ಲಲಿತಾ ನಾಯಕ ಮತ್ತು ಬಾನು ಮುಷ್ತಾಕ ಅವರ ಸಾಹಿತ್ಯ: ತೌಲನಿಕ ಅಧ್ಯಯನ- ಪೂರ್ಣಿಮಾ, ೨೦೨೦ (ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ)

೨೪ ಜನಪದ ಸಾಹಿತ್ಯ: ಹಿಂಸೆ-ಅಹಿಂಸೆಯ ಸ್ತ್ರೀ ಕೇಂದ್ರಿತ ಕಥನ- ಧನಲಕ್ಷ್ಮೀ. ಐ. ಡಿ, ೨೦೨೧ (ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ)

೨೫ ಕನ್ನಡ ಮಹಿಳಾ ಕಥಾ ಸಾಹಿತ್ಯದಲ್ಲಿ ದಾಂಪತ್ಯದ ಪರಿಕಲ್ಪನೆ- ಜ್ಯೋತಿ ಮೇಟಿ, ೨೦೨೨ (ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ)

೨೬ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಸ್ವರೂಪ- ದೇವಾಪೂರ ರಶ್ಮಿ, ೨೦೨೨ (ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ)

ಸಂಶೋಧನ ವಿದ್ಯಾರ್ಥಿನಿ	ಮಾರ್ಗದರ್ಶಕರು
(ಗಾಯತ್ರಿ ಆರ್ ಅಂಟೀನ)	(ಪ್ರೊ. ಮಹೇಶ ಚಿಂತಾಮಣಿ)